(ಮಾನ್ಯ ವಾಟಾಳ್ ನಾಗರಾಜ್‌ರವರು ಇಡೀ ದಿನ ಸಭೆಗೆ ಬಹಿಷ್ಕಾರ ಹಾಕುತ್ತೇನೆಂದು ಹೇಳಿ ಸಭಾ ತ್ಯಾಗವನ್ನು ಮಾಡಿದರು.)

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಉಪ ಸಭಾಧ್ಯಕ್ಷೀಣಿಯವರೆ, ನಾನು ಏನು ಹೇಳಬೇಕೋ ನನಗಂತೂ ಗೊತ್ತಾಗುತ್ತಿಲ್ಲ, ಏಕೆಂದರೆ ಅಶಿಸ್ತಿನ ನಂತರ ಮತ್ತೊಂದು ಅಶಿಸ್ತು ಅದರ ಜೊತೆಗೆ ಹೆಚ್ಚಿನ ಅಶಿಸ್ತು ಕಂಡುಬರುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಇರಿ ಎಂದು ನಾನು ಹೇಳುತ್ತಿದ್ದೆ. ಶಿಸ್ತನ್ನು ಹೇಳುವವರು ಮೊದಲು ಶಿಸ್ತನ್ನು ಕಲಿಯಬೇಕು. ಇದನ್ನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಅವರು ಹಾಜರಿದ್ದಾಗಲೇ ಹೇಳಬೇಕೆಂದಿದ್ದೆ ಈಗ ಅವರಿಲ್ಲ ನಂತರ ಅವರಿಗೆ ಹೇಳುತ್ತೇನೆ. ಅಧ್ಯಕ್ಷರ ಮೂಲಕ ಮಾತನಾಡಬೇಕೆಂದು ಸದಸ್ಯರುಗಳಿಗೆ ನಿಯಮ ಇದೆ. ಸದಸ್ಯರುಗಳೇ ಪರಸ್ಪರ ಮಾತನಾಡುವುದು ಸರಿಯಲ್ಲ. ಹಿರಿಯ ಸದಸ್ಯರಾದ ಮಾನ್ಯ ಮಂಜುನಾಥ್‌ರವರು ಅದೇ ಕೆಲಸ ಮಾಡುತ್ತಾರೆ. ಕಿರಿಯ ಸದಸ್ಯರಾದ ಶ್ರೀ ಶಿವರಾಮೇಗೌಡರೂ ಅದೇ ಕೆಲಸ ಮಾಡುತ್ತಾರೆ. ನಾವು ವೃಥಾ ಕಾಲಹರಣ ಮಾಡುತ್ತಿದ್ದೇವೆ. ಒಂದು ಸರಿಯಾದ ಶಿಸ್ತಿಗೆ ನಾವು ಬರಬೇಕು, ಇಲ್ಲದಿದ್ದರೆ ಸರಿಯಲ್ಲ. ಏನೋ ಉತ್ಸಾಹದಿಂದ ನನ್ನನ್ನು ಸದನಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈ ಸದನಕ್ಕೆ ಬರಬೇಕೆಂದು ನನಗಂತೂ ಉತ್ಸಾಹ ಇರಲಿಲ್ಲ. ಈ ಸದನದ ಮೂಲಕ ಒಂದು ಬದಲಾವಣೆಯಾಗುತ್ತದೆಂದು ಜನ ಇನ್ನೂ ನಂಬಿಕೆ ಇಟ್ಟಿದ್ದಾರೆ. ಅವರು ಕಳುಹಿಸಿಕೊಟ್ಟಿದ್ದಾರೆ. ಅವರಿಗೆ ನಾವು ಬಹಳ ಮೋಸಮಾಡುತ್ತಿದ್ದೇವೆ. ಅದನ್ನು ನಾವು ಪ್ರತಿಯೊಬ್ಬರು ಆಲೋಚನೆ ಮಾಡಬೇಕು. ಆ ಕಾರಣ ನಾನು ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡಿದೆ; ಅವರು ಸದನದೊಳಗೆ ಬರುವುದಕ್ಕೆ ಸಿದ್ದವಿಲ್ಲ, ಆದ್ದರಿಂದ ತಾವು ಇವತ್ತು ಈ ಸಭೆಯನ್ನು ಮುಂದೂಡಿ, ಅವರ ಜೊತೆ ಮಾತುಕತೆ ನಡೆಸಿ ಒಂದು ಶಿಸ್ತಿಗೆ ಇವತ್ತಾದರೂ ಬರೋಣವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ; ನಮಸ್ಕಾರ.

ಛೇರ್ಮನ್: ಈಗ ಮಾನ್ಯ ರಾಣೆಯವರು ಮಾತನಾಡಲಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ: ರಾಣೆಯವರು ಮುಂದುವರಿಸುವುದಾದರೆ ನಾನು ಮತ್ತೆ ಸಭಾ ತ್ಯಾಗ ಮಾಡುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್: ಪ್ರೊಫೆಸರ್ ನಂಜುಂಡಸ್ವಾಮಿಯವರು ಒಂದು ರೀತಿಯಲ್ಲಿ ಒಳ್ಳೆಯ ಮನೋಭಾವನೆಯಿಂದ ಹೇಳಿದ್ದಾರೆ. ಅವರು ಸಂಖ್ಯೆಯಲ್ಲಿ ಕಡಿಮೆ ಇರಬಹುದು. ಆದರೆ ನಮ್ಮ ಹಾಗೆ ಇಡೀ ರಾಷ್ಟ್ರದಲ್ಲಿ ಅನೇಕ ಶಾಸನ ಸಭೆಗಳು ಇವತ್ತು ಕೆಲಸ ಮಾಡುತ್ತಿವೆ. ನಾವು ಕಾಂಗ್ರೆಸ್ ಪಕ್ಷದವರು ಅನೇಕ ರಾಜ್ಯಗಳಲ್ಲಿ ವಿರೋಧ ಪಕ್ಷದವರಾಗಿ ಕೆಲಸ ಮಾಡುತ್ತಿದ್ದೇವೆ. ಇಂತಹ ಒಂದು ದಿಸೆಯಲ್ಲಿ ಸಹ ಇಂತಹ ಒಂದು ಪರಿಸ್ಥಿತಿ ಬಂದಾಗ ಆಳುವ ಪಕ್ಷವೂ ಸಹಿತ ನಮ್ಮೊಡನೆ ಸಹಕರಿಸಿ ಯಾವ ರೀತಿ ಮಾಡಬೇಕು ಎಂದು ನಿರ್ಣಯವನ್ನು ಅಲ್ಲೂ ಮಾಡಿದ್ದಾರೆ. ಆ ಒಂದು ಸಂಪ್ರದಾಯಕ್ಕೆ ಇವತ್ತೂ ನಾವು ಹೋಗೋಣ. ಅವರು ಸಂಖ್ಯೆಯಲ್ಲಿ ಕಡಿಮೆ ಇರಬಹುದು. ಸದನ ಇಡೀ ದಿವಸ ಮುಂದುವರಿಯತಕ್ಕ ಅನಾಹುತವನ್ನು ತಪ್ಪಿಸಲು 15 ನಿಮಿಷ ಮುಂದೆ ಹಾಕಿ ಅವರನ್ನು ಕರೆಸಿ, ಯಾವ ವಿಚಾರವಾಗಿ ನೀವು ಹೊರೆಗೆ ಹೋದಿರಿ ಎಂದು ಕೇಳೋಣ. ಇದು ಪ್ರಜಾಪ್ರಭುತ್ವ, ವಿಧಾನ ಸಭೆ ನಡೆಯಬೇಕಾದರೆ ಎರಡೂ ಕಡೆ ಬರತಕ್ಕ ಘರ್ಷಣೆಗಳು ಇದ್ದೇ ಇರುತ್ತವೆ. ಇದು ಅಂತಹ ದೊಡ್ಡ ಘರ್ಷಣೆ ಏನೂ ಅಲ್ಲ. ಅವರು ಕೇಳುತ್ತಾ ಇರತಕ್ಕದ್ದು ಏನೆಂದರೆ ಸರ್ಕಾರದ ಅಧಿಕಾರಿಗಳು ಬಂದಿಲ್ಲ, ಯಾವ ರೀತಿ, ಯಾರ ಮುಖಾಂತರ ನಾವು ಹೇಳಬೇಕು, ಮಾನ್ಯ ಮಂತ್ರಿಗಳು ಬರಬೇಕು ಎಂಬ ಒಳ್ಳೆಯ ಬೇಡಿಕೆಯನ್ನು ಹಾಕಿದ್ದಾರೆ. ಅವರು ನ್ಯಾಯವನ್ನು ಕೇಳಿದರೂ ಸಹ ಆಳುವ ಪಕ್ಷ ಅದನ್ನು ತಿರಸ್ಕಾರ